# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 56 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಕೆ.ಎ. ತಿಪ್ಪೇಸ್ವಾಮಿ<br>(ನಾಮ ನಿರ್ದೇಶನ ಹೊಂದಿದವರು) |
| **ಉತ್ತರಿಸಬೇಕಾದ ದಿನಾಂಕ** | : | 04.12.2023 |
| **ಉತ್ತರಿಸಬೇಕಾದ ಸಚಿವರು** | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾದ ಜನೌಷಧಿ' ಎಂದಿನಿಂದ ಜಾರಿಗೊಳಿಸಲಾಗುತ್ತಿದೆ ಹಾಗೂ ಈ ಯೋಜನೆಯ ರೂಪುರೇಷೆಗಳು ಯಾವುವು: ಮತ್ತು ಈ ಯೋಜನೆಯಡಿ ಸಾಧಿಸಲಾಗಿರುವ ಪ್ರಗತಿಎಷ್ಟು:<br>(ಪೂರ್ಣ ಮಾಹಿತಿ ನೀಡುವುದು)</td><td>ಸರ್ಕಾರದ ಆದೇಶ ಸಂಖ್ಯೆ: ಆಕುಕ 164 ಹೆಚ್‌ಪಿಸಿ 2016, ದಿ:01.10.2016 ರಂತೆ ಪ್ರಾರಂಭಿಸಲಾಗಿದೆ(ಪ್ರತಿ ಲಗತ್ತಿಸಿದೆ). ಈ ಯೋಜನೆಯ ರೂಪು ರೇಷೆಗಳು ಈ ಕೆಳಕಂಡಂತಿರುತ್ತವೆ.<br><br>• ನಿರುದ್ಯೋಗಿ ಫಾರ್ಮಸಿ ಪದವಿಧರರು ಅರ್ಜಿ ಸಲ್ಲಿಸಿ ಜನೌಷಧಿ ಮಳಿಗೆ ತೆರೆಯಲು ಆಸಕ್ತಿ ವ್ಯಕ್ತಪಡಿಸಿ ಅರ್ಜಿ ಸಲ್ಲಿಸಿದ್ದಲ್ಲಿ, ಆಸ್ಪತ್ರೆ ಆವರಣದಲ್ಲಿ 120 ಚದರ ಅಡಿ ಸ್ಥಳಾವಕಾಶ ಬಾಡಿಗೆ ರಹಿತವಾಗಿ ನೀಡಲಾಗುವುದು.<br>• ಅರ್ಜಿ ಸಲ್ಲಿಸಿದ ಫಲಾನುಭವಿಗಳನ್ನು ಆಯಾ ಆಸ್ಪತ್ರೆ ಆರೋಗ್ಯ ರಕ್ಷಾ ಸಮಿತಿ ಮೂಲಕ ಆಯ್ಕೆ ಮಾಡಲಾಗುವುದು.<br>• ಹಿರಿಯರು, ಮಹಿಳಾ ಉದ್ಯಮಿಗಳು ಅರ್ಜಿ ಸಲ್ಲಿಸಿದಲ್ಲಿ ಆದ್ಯತೆ ಮೇಲೆ ಪರಿಗಣಿಸಲಾಗುವುದು.<br>• ಆಯ್ಕೆಯಾದ ಅರ್ಜಿದಾರ ಡ್ರಗ್ಸ್ ಕಂಟ್ರೋಲರ್ ಕಛೇರಿಯಲ್ಲಿ ಜನರಿಕ್ ಔಷಧಿ ಮಳಿಗೆ ತರೆಯಲು ರಹದಾರಿ ಪಡೆದು ನಂತರ Pradhan Mantri Bhartyhiya Janaushadhi Pariyojana-PMBJP ಸಂಸ್ಥೆಗೆ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿ, ನಿಗದಿತ ಶುಲ್ಕ ಪಾವತಿಸಿ ಅನುಮತಿ ಪಡೆದು ಜನೌಷಧಿಮಳಿಗೆ ಪ್ರಾರಂಭ ಮಾಡುತ್ತಾರೆ. ಜನೌಷಧಿಯಲ್ಲಿ 1759 ಔಷಧಿಗಳು ಹಾಗೂ 280 ಸರ್ಜಿಕಲ್ ಉಪಕರಣಗಳನ್ನು ಮೆ॥ ಮಹಾವೀರ್ ಡ್ರಗ್ಸ್ ಹೌಸ್ ಬೆಂಗಳೂರು, ಮೆ॥ ಜೀವ ರಕ್ಷಾ ಡ್ರಗ್ಸ್ ಹೌಸ್ ಮೈಸೂರು ಹಾಗೂ Karnataka State Cooperative Marketing Fedration-KSCMF ಹುಬ್ಬಳ್ಳಿ ರವರು ರಾಜ್ಯಾದಾದ್ಯಂತ ಜನೌಷಧಿ ಮಳಿಗೆಗಳಿಗೆ ಅವರ ಬೇಡಿಕೆಗನುಗುಣವಾಗಿ ಸರಬರಾಜು ಮಾಡುತ್ತಾರೆ.<br>• ಜನೌಷಧಿ ಪ್ರಾರಂಭಿಸುವ ಫಲಾನುಭವಿಗಳಿಗೆ ಶೇ 20 ರಷ್ಟು ಲಾಭಂಶ ದೊರೆಯುತ್ತದೆ.<br>• ಅವರ ಮಾಸಿಕ ವಹಿವಾಟಿನ ಶೇ.15 ರಷ್ಟು ರೂ 15000/- ಮೀರದಂತೆ ರೂ. 2.50 ಲಕ್ಷಗಳವರೆಗೆ ಪ್ರೋತ್ಸಾಹಧನವನ್ನು PMBJP ಸಂಸ್ಥೆಯು ನೀಡುತ್ತದೆ.<br><br>ಒಟ್ಟು 1127 ಜನೌಷಧಿ ಮಳಿಗೆಗಳು ಸ್ಥಾಪಿತವಾಗಿರುತ್ತದೆ. (ಅನುಬಂಧ-01) ಲಗತ್ತಿಸಿದೆ.<br><br>
<table><tr><th>ಖಾಸಗಿ</th><th>ಸರ್ಕಾರಿ ಜಾಗ</th><th>ಒಟ್ಟು</th></tr><tr><td>920</td><td>207</td><td>1127</td></tr></table>
</td></tr>
</table>

| | | |
|---|---|---|
| ಆ) | ರಾಜ್ಯದಲ್ಲಿ 'ಜನೌಷಧಿ' ಯೋಜನೆಯಡಿ, ಜನ ಸಾಮಾನ್ಯರನ್ನು ಕಂಗೆಡಿಸುತ್ತಿರುವ ರಕ್ತ ಒತ್ತಡ, ಸಕ್ಕರೆ ಕಾಯಿಲೆ, ಹೃದ್ರೋಗ ಮುಂತಾದ ಕಾಯಿಲೆಗಳಿಗೆ ಜನೌಷಧಿ ಮಾತ್ರೆಗಳು ಲಭ್ಯವಾಗದೇ ಈ ಯೋಜನೆ ನಿಷ್ಕ್ರಿಯಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಯೋಜನೆಯನ್ನು ಸರಿದಾರಿಗೆತರಲು ಕೈಗೊಂಡಿರುವ ಕ್ರಮಗಳೇನು; (ಪೂರ್ಣ ಮಾಹಿತಿ ನೀಡುವುದು) | 'ಜನೌಷಧಿ' ಕೇಂದ್ರಗಳಲ್ಲಿ ಸಕ್ಕರೆ ಕಾಯಿಲೆ, ಅತಿ ರಕ್ತ ದೊತ್ತಡ, ಹೃದ್ರೋಗ, ಕ್ಯಾನ್ಸರ್ ಇನ್ನಿತರ ಸಾಮಾನ್ಯ ಖಾಯಿಲೆಗಳಿಗೆ ಸ್ಥಳೀಯ ಬೇಡಿಕೆಗನುಸಾರವಾಗಿ ಮಾರ್ಗಸೂಚಿ ಪ್ರಕಾರ ದಾಸ್ತಾನು ನಿರ್ವಹಿಸಲಾಗುತ್ತದೆ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಅಸಾಂಕ್ರಾಮಿಕ ಖಾಯಿಲೆಗಳಾದ ಸಕ್ಕರೆ ಕಾಯಿಲೆ, ಅತಿ ರಕ್ತ ದೊತ್ತಡ ಹಾಗೂ ಇನ್ನಿತರ ಸಾಮಾನ್ಯ ಖಾಯಿಲೆಗಳಿಗೆ ಅವಶ್ಯವಿರುವ ಔಷಧಿಗಳನ್ನು National free Diagnostic service-NFDS ಕಾರ್ಯಕ್ರಮದಡಿಯಲ್ಲಿ ಉಚಿತವಾಗಿ ನೀಡಲಾಗುತ್ತಿದೆ. |
| ಇ) | ರಾಜ್ಯ ಸಲ್ಲಿರುವ ಕೇಂದ್ರ ಸರ್ಕಾರದ ನಿಯಮದ ಪ್ರಕಾರ' ಜನೌಷಧಿ' ಕೇಂದ್ರಗಳಲ್ಲಿ 1800ಕ್ಕೂ ಹೆಚ್ಚು ಔಷಧಗಳನ್ನು ವಿತರಿಸಬೇಕಾಗಿದ್ದು, ಪ್ರಸ್ತುತ ವಿತರಿಸಲಾಗುತ್ತಿರುವ ಔಷಧಿಗಳ ಸಂಖ್ಯೆ ಎಷ್ಟು; ಮತ್ತು ಅವು ಯಾವುವು (ಪೂರ್ಣ ವಿವರ ನೀಡುವುದು) | 'ಜನೌಷಧಿ' ಕೇಂದ್ರಗಳಲ್ಲಿ 1759 ಹಾಗೂ 280 ಸರ್ಜಿಕಲ್ ಉಪಕರಣಗಳು ಸರಬರಾಜು ಮಾಡಲಾಗುತ್ತಿದೆ.<br>ಜನೌಷಧಿ ಮಳಿಗೆಗಳು ಸ್ಥಳೀಯ ಬೇಡಿಕೆಗನುಸಾರ ಮಾರ್ಗಸೂಚಿ ಅನುಸಾರ ದಾಸ್ತಾನು ನಿರ್ವಹಿಸುತ್ತಿವೆ.<br>ಸಾರ್ವಜನಿಕರಿಗೆ ತಮ್ಮ ಸಮೀಪವಿರುವ ಔಷಧಿಗಳ ಮಳಿಗೆ ವಿವರ ಹಾಗೂ ಜನೌಷಧಿ ಲಭ್ಯವಿರುವ ಔಷಧಗಳ ವಿವರವನ್ನು ಈ ಕೆಳಗಿನವೆಬ್ ಸೈಟ್ ನಲ್ಲಿ ನೋಡಬಹುದಾಗಿದೆ.<br>https://janaushadhi.gov.in/SortingView.aspx. |
| ಈ) | ಕೇಂದ್ರದ ಮಹಾತ್ವಕಾಂಕ್ಷೆ ಯೋಜನೆ 'ಜನೌಷಧಿ' ಹಾದಿತಪ್ಪಲು ಖಾಸಗಿ ಔಷಧ ಕಂಪನಿಗಳ ಲಾಭಿ ಕಾರಣವಾಗಿದ್ದು, ಲಾಭಿ ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಪೂರ್ಣ ವಿವರ ನೀಡುವುದು) | National free Diagnostic service- NFDS ಕಾರ್ಯಕ್ರಮದಡಿಯಲ್ಲಿ ಔಷಧಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ. |

**ಸಂಖ್ಯೆ: ಆಕುಕ 70 ಎಸ್.ಟಿ.ಕ್ಯೂ 2023**

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಸರ್ಕಾರಿ ಆಸ್ಪತ್ರೆಗಳಲ್ಲಿ ಜನೌಷಧಿ ಮಳಿಗೆಗಳನ್ನು ತೆರೆಯಲು ಸರ್ಕಾರದ ಅನುಮತಿ ನೀಡುವ ಬಗ್ಗೆ

ಓದಲಾಗಿದೆ:- 1) ಅರೆ ಸರ್ಕಾರಿ ಪತ್ರ ಸಂ: X.11035/185/2015-DFQC, Dated: 02-07-2016.

2) ಅರೆ ಸರ್ಕಾರಿ ಪತ್ರ ಸಂಖ್ಯೆ: ಆಕುಕ 420 ಪಿಆರ್‌ಎಸ್ 2016, ದಿನಾಂಕ: 20/09/2016.

*****

ಪ್ರಸ್ತಾವನೆ:

ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು, ಕೇಂದ್ರ ಸರ್ಕಾರದ ಜನೌಷಧಿ ಕಾರ್ಯಕ್ರಮದ ಅಡಿ ಸಾಮಾನ್ಯ ಬಡ ಜನರಿಗೆ ಉತ್ತಮ ಗುಣಮಟ್ಟದ ಜನರಿಕ್ ಔಷಧಿಗಳನ್ನು ಕಡಿಮೆ ಹಾಗೂ ಕೈಗೆಟುವ ದರದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರಾರಂಭಿಸಲಾಗುವ ಜನೌಷಧಿ ಮಳಿಗೆಗಳ ಮೂಲಕ ಸಾರ್ವಜನಿಕರಿಗೆ ತಲುಪಿಸುವ ಉದ್ದೇಶದಿಂದ ಜನೌಷಧಿ ಮಳಿಗೆಗಳನ್ನು ಪ್ರಾರಂಭಿಸಲು ಇಚ್ಛಿಸುವ ವ್ಯಕ್ತಿಗಳಿಗೆ ಅಗತ್ಯ ರಹದಾರಿಗಳನ್ನು ಒದಗಿಸಲು ರಾಜ್ಯದ ಔಷಧ ನಿಯಂತ್ರಕರಿಗೆ ನಿರ್ದೇಶನ ನೀಡುವಂತೆ ಕೋರಿರುತ್ತಾರೆ.

ಸಾಮಾನ್ಯ ಬಡಜನರಿಗೆ ಉತ್ತಮ ಗುಣಮಟ್ಟದ ಜನರಿಕ್ ಔಷಧಗಳನ್ನು ಕಡಿಮೆ ಹಾಗೂ ಕೈಗೆಟುಕುವ ದರದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರಾರಂಭಿಸಲಾಗುವ ಜನೌಷಧಿ ಅಂಗಡಿಗಳ ಮೂಲಕ ದೊರಕುವಂತೆ ಮಾಡುವ ಕೇಂದ್ರ ಸರ್ಕಾರದ "ಜನೌಷಧಿ ಮಳಿಗೆಗಳ ಸ್ಥಾಪನೆಯ ಯೋಜನೆ"ಯನ್ನು ಕರ್ನಾಟಕ ಸರ್ಕಾರವು ಕಾರ್ಯರೂಪಕ್ಕೆ ತರಲು ಉದ್ದೇಶಿಸಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆ ಹಾಗೂ ಕೆಲವು ಜಿಲ್ಲಾ ಆಸ್ಪತ್ರೆಗಳಲ್ಲಿ ಒಟ್ಟು 200 ಜನೌಷಧಿ ಅಂಗಡಿಗಳನ್ನು ಪ್ರಾರಂಭಿಸಲು ತೀರ್ಮಾನಿಸಿ, ಈ ಮಳಿಗೆಗಳ ನಿರ್ವಹಣೆ ಹಾಗೂ ಜವಾಬ್ದಾರಿಯನ್ನು ಕರ್ನಾಟಕ ಡ್ರಗ್ ಲಾಜಿಸ್ಟಿಕ್ ಆಂಡ್ ವೇರ್ ಹೌಸಿಂಗ್ ಸೊಸೈಟಿ ಹಾಗೂ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಗಳನ್ನು ನೋಡಲ್ ಸಂಸ್ಥೆಗಳನ್ನಾಗಿ ನಾಮನಿರ್ದೇಶನ ಮಾಡಲು ಉದ್ದೇಶಿಸಿದೆ.

ಅರ್ಹ ಸರ್ಕಾರಿಯೇತರ ಸಂಸ್ಥೆಗಳು, ದತ್ತಿ ಸಂಸ್ಥೆಗಳು, ನಿರುದ್ಯೋಗಿ ವೈದ್ಯರುಗಳು, ಹಾಗೂ ಫಾರ್ಮಾಸಿಸ್ಟ್‌ಗಳು ಮತ್ತು ಸ್ವಸಹಾಯ ಗುಂಪುಗಳು ಹಾಗೂ ಆರೋಗ್ಯ ರಕ್ಷಾ ಸಮಿತಿಗಳು ಈ

ಮಳಿಗೆಗಳನ್ನು ತೆರೆಯಲು ಅರ್ಹರಿದ್ದು, ಇಚ್ಚಿಸಿದ ವ್ಯಕ್ತಿಗಳು ಅರ್ಜಿ ಸಲ್ಲಿಸಿದಲ್ಲಿ ನಿಯಮಾನುಸಾರ ಪರಿಶೀಲಿಸಿ ಆಯ್ಕೆ ಮಾಡಲು ಕ್ರಮ ಜರುಗಿಸಲಾಗುವುದು.

ಕರ್ನಾಟಕ ಸರ್ಕಾರವು ಆಯ್ದ ಸಮುದಾಯ ಆರೋಗ್ಯ ಕೇಂದ್ರ, ತಾಲೂಕಾ ಆಸ್ಪತ್ರೆ ಹಾಗೂ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಅಥವಾ ಸರ್ಕಾರವು ನಿರ್ಧರಿಸುವ ಬೇರೆ ಯಾವುದೇ ಸೂಕ್ತ ಸ್ಥಳಗಳಲ್ಲಿ ಈ ಜನೌಷಧಿ ಮಳಿಗೆಗಳನ್ನು ಪ್ರಾರಂಭಿಸಲು ಬೇಕಾದ ಜಾಗವನ್ನು ಉಚಿತವಾಗಿ ಒದಗಿಸಲಾಗುವುದು.

Bureau of Pharma PSUs of India-BPPI ಸಂಸ್ಥೆಯು ಪ್ರತಿ ಒಂದು ಜನೌಷಧಿ ಅಂಗಡಿಯನ್ನು ಪ್ರಾರಂಭಿಸಲು ನೋಡಲ್ ಸಂಸ್ಥೆಗೆ ಅಥವಾ ಕಾರ್ಯನಿರ್ವಹಿಸುವ ಸಂಸ್ಥೆಗೆ ಪ್ರಾರಂಭಿಕವಾಗಿ ರೂ.1.00 ಲಕ್ಷದ ಮೌಲ್ಯದ ಔಷಧಿಗಳನ್ನು ಸರಬರಾಜು ಮಾಡಲು ಹಾಗೂ 1.00 ಲಕ್ಷ ರೂಪಾಯಿಗಳನ್ನು ಕೇಂದ್ರಗಳ ಸ್ಥಾಪನೆಗೆ ಹಾಗೂ ಪಿಠೋಪಕರಣಗಳನ್ನು ಒದಗಿಸಲು ಖರ್ಚು ಹಾಗೂ 50,000/- ರೂಪಾಯಿಗಳನ್ನು ಕೇಂದ್ರಗಳ ನಿರ್ವಹಣೆಗೆ ಬೇಕಾದ ಗಣಕ ಯಂತ್ರ ಹಾಗೂ ಇತರ ಉಪಕರಣಗಳ ಖರೀದಿ ಸೇರಿ ಪ್ರತಿ ಕೇಂದ್ರಕ್ಕೆ 2.5 ಲಕ್ಷಗಳ ಆರ್ಥಿಕ ಸಹಾಯವನ್ನು ಒದಗಿಸುವುದು.

ಕೇಂದ್ರ ಸರ್ಕಾರದ ಔಷಧೀಯ ಇಲಾಖೆಯು ಗುರುತಿಸಿರುವ Bureau of Pharma PSUs of India-BPPI) ಸಂಸ್ಥೆಯು ಜನೌಷಧಿ ಮಳಿಗೆಗಳ ನಿರ್ವಹಣೆಗೆ ಸಂಬಂಧಿಸಿದಂತೆ, ಈ ಕೆಳಕಂಡ ಪಾತ್ರವಹಿಸಬೇಕಾಗಿರುತ್ತದೆ.

- ಕೈಗೆಟುಕುವ ದರಗಳಲ್ಲಿ ಉತ್ತಮ ಗುಣಮಟ್ಟದ ಜನರಿಕ್ ಔಷಧಿಗಳನ್ನು ದೊರಕಿಸುವುದು.
- ಜನರಿಕ್ ಔಷಧಿಗಳನ್ನು ಜನೌಷಧಿ ಕೇಂದ್ರಗಳ ಮೂಲಕ ಮಾರಾಟ ಮಾಡಲು ಸಹಕರಿಸುವುದು.
- ಕೇಂದ್ರದ ಔಷಧ ಸಾರ್ವಜನಿಕ/ಖಾಸಗಿ ವಲಯದ ಘಟಕಗಳ ಮೂಲಕ ಈ ಔಷಧಿಗಳ ಸರಬರಾಜು ಮಾಡಲು ಸಹಕರಿಸುವುದು.
- ಜನೌಷಧಿ ಕೇಂದ್ರಗಳ ಸೂಕ್ತ ಆಯ್ಕೆ ಮಾಡಲು ಸರ್ಕಾರಕ್ಕೆ ಸಹಾಯ ಮಾಡಬಹುದು.
- ಸೂಕ್ತ ನಿರ್ವಹಣಾ ಸಂಸ್ಥೆಗಳನ್ನು ಆಯ್ಕೆ ಮಾಡಲು ಸರ್ಕಾರಕ್ಕೆ ಸಹಾಯ ಮಾಡಬಹುದು.
- ಅವಧಿ ಮೀರಿದ/ಒಡೆದು ಹೋದ ಔಷಧಿಗಳನ್ನು ಗರಿಷ್ಠ ಅಥವಾ ಖರೀದಿ ಮೌಲ್ಯಕ್ಕೆ 2%ರಷ್ಟು ಹಿಂಪಡೆಯುವುದು.

ಜನೌಷಧಿ ಮಳಿಗೆಗಳನ್ನು ತೆರೆಯುವ ನೊಂದಾಯಿತ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಮಳಿಗೆಗಳ ನಿರ್ವಹಣೆ ಮತ್ತು ಜವಾಬ್ದಾರಿಗೆ ಸಂಬಂಧಿಸಿದಂತೆ ಸರ್ಕಾರ/ Bureau of Pharma PSUs of India-BPPI) ಗಳೊಂದಿಗೆ ತ್ರಿಪಕ್ಷಿಯ ಒಡಂಬಡಿಕೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ.

ಕೇಂದ್ರ ಸರ್ಕಾರದ ಜನೌಷಧಿ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರವು ಯಥಾವತ್ತಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೇಲ್ಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು 200 ಜನೌಷಧಿ ಮಳಿಗೆಗಳನ್ನು ಪ್ರಾರಂಭಿಸಲು ಸರ್ಕಾರ ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 161 ಹೆಚ್‌ಪಿಸಿ 2016,
ಬೆಂಗಳೂರು, ದಿನಾಂಕ: 29-09-2016.

ಮೇಲೆ ಪ್ರಸ್ತಾಪಿಸಿರುವ ಹಿನ್ನೆಲೆಯಲ್ಲಿ ಸರ್ಕಾರವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆ, ಹಾಗೂ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಸುಮಾರು 200 ಜನೌಷಧಿ ಮಳಿಗೆಗಳನ್ನು ಸ್ಥಾಪಿಸಲು ಸರ್ಕಾರದ ಅನುಮತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ವಿ. ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಇವರಿಗೆ:

1) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
2) ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
3) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
4) ಅಪರ ನಿರ್ದೇಶಕರು, ಕರ್ನಾಟಕ ಸ್ಟೇಟ್ ಡ್ರಗ್ಸ್ ಅಂಡ್ ಲಾಜಿಸ್ಟಿಕ್ಸ್ ವೇರ್ ಹೌಸಿಂಗ್ ಸೊಸೈಟಿ, ನಂ. 1, ಡಾ: ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ. ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು-79.
5) ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
6) ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಮತ್ತು ಎಲ್ಲಾ ಜಿಲ್ಲಾ ಶಸ್ತ್ರ ಚಿಕಿತ್ಸಕರುಗಳು (ನಿರ್ದೇಶಕರ ಮುಖಾಂತರ)
7) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
8) ಶಾಖಾ ರಕ್ಷಾ ಕಡತ / ಬಿಡಿ ಪ್ರತಿಗಳು.

ಅನುಬಂಧ-01

# Status of Janaushadi Stores as on 24.11.2023

| Sl.no | District | Private | Government | Grand Total |
|---|---|---|---|---|
| 1 | Bagalkot | 23 | 1 | 24 |
| 2 | Belagavi | 11 | 7 | 18 |
| 3 | Bellary | 14 | 6 | 20 |
| 4 | Bengaluru Rural | 11 | 7 | 18 |
| 5 | Bengaluru Urban | 303 | 28 | 331 |
| 6 | Bidar | 7 | 13 | 20 |
| 7 | Chamarajanagar | 9 | 4 | 13 |
| 8 | chikkabalapura | 2 | 7 | 9 |
| 9 | Chikkamagaluru | 7 | 8 | 15 |
| 10 | Chitradurga | 7 | 9 | 16 |
| 11 | Dakshina Kannada | 86 | 4 | 90 |
| 12 | Devanagere | 21 | 8 | 29 |
| 13 | Dharwad | 35 | 5 | 40 |
| 14 | Gadag | 6 | 6 | 12 |
| 15 | Hassan | 13 | 6 | 19 |
| 16 | Haveri | 26 | 7 | 33 |
| 17 | Kalaburgi | 17 | 4 | 21 |
| 18 | Kodagu | 12 | 4 | 16 |
| 19 | Kolar | 7 | 8 | 15 |
| 20 | Koppal | 11 | 5 | 16 |
| 21 | Mandya | 33 | 8 | 41 |
| 22 | Mysuru | 58 | 6 | 64 |
| 23 | Raichur | 18 | 5 | 23 |
| 24 | Ramanagara | 7 | 4 | 11 |
| 25 | Shivamogga | 33 | 6 | 39 |
| 26 | Tumkur | 25 | 11 | 36 |
| 27 | Udupi | 55 | 2 | 57 |
| 28 | Uttara Kannada | 20 | 8 | 28 |
| 29 | Vijayanagar | 6 | 2 | 8 |
| 30 | Vijayapura | 29 | 4 | 33 |
| 31 | Yadgiri | 8 | 4 | 12 |
| | Grand Total | 920 | 207 | 1127 |